# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 48/2024

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ಡಾ. ದಾಕ್ಷಾಯಿಣಿ | ಪ್ರಾಸಾಃ | 05 |
| **ಗಂಡನ ಹೆಸರುಃ** | ಸಂತೋಷ | ಚಾಸಾಃ | 07 |
| **ವಯಸ್ಸುಃ** | 42 | ಪ್ರಮಾಣ ವಚನ ಭೋದಿಸಿದ ದಿನಾಂಕ | 18.07.2025 |
| **ಉದ್ಯೋಗಃ** | ವೈದ್ಯಾಧಿಕಾರಿ | | |
| **ವಾಸ ಸ್ಥಳಃ** | ಚಿಂತಾಮಣಿ | | |

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಈಗ ನನಗೆ ತೋರಿಸಿರುವ ನಿಪಿ-2 ಮಹಜರ್ ನಲ್ಲಿರುವ ಸಹಿ ನನ್ನದು. ಅದನ್ನು ನಿಪಿ2ಬಿ ಎಂದು ಗುರುತಿಸಲಾಯಿತು. 22.08.2024 ರಂದು ನಾನು ಚಿಂತಾಮಣಿ ಆಸ್ಪತ್ರೆಯಲ್ಲಿ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುತ್ತಿದ್ದಾಗ ಚಿಂತಾಮಣಿ ಪೋಲಿಸರು ನಮ್ಮ ಆಸ್ಪತ್ರೆಯ ಬಳಿ ಬಂದಿದ್ದರು. ಎಂದು ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಥಳ ಮಹಜರ್ ನನ್ನ ಸಮಕ್ಷಮ ಜರುಗಿಸಿದ್ದು, ಚಾಸಾ-1 ರವರು ಸದರಿ ಸ್ಥಳವನ್ನು ಗುರುತಿಸಿದ ಮೇರೆಗೆ ಪೋಲಿಸರು ನಿಪಿ-2 ಮಹಜರ್ ದಾಖಲಿಸಿದ್ದರು. ಚಾಸಾ-8 ರವರು ಕೂಡ ನನ್ನೊಂದಿಗೆ ಪಂಚರಾಗಿದ್ದರು. ಸ್ಥಳದಲ್ಲಿ ಪೋಟೊ ಹಾಗೂ ವಿಡಿಯೋಗಳನ್ನು ಸಹ ತೆಗೆದಿದ್ದರು. ಸದರ ಪೋಟೊ ಈಗ ನೋಡುತ್ತಿದ್ದು ನಿಪಿ-4 ಮತ್ತು ನಿಪಿ-5 ಎಂದು ಈಗಾಗಲೇ ಗುರತಿಸಲಾಗಿದೆ. ಸದರಿ ಪೋಟೋದಲ್ಲಿ ನಾನು ಇತರ ಪಂಚಸಾಕ್ಷಿ ಕೂಡ ಇದ್ದೇವೆ. ಈ ಬಗ್ಗೆ ಹೇಳಿಕೆ ನೀಡಿದ್ದೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಂ.ವಿ.ಎಂ. ವಕೀಲರಿಂದ ಪಾಟೀ ಸವಾಲು</u>**

ಪೋಲಿಸರು ನನಗೆ ಲಿಖಿತ ನೋಟಿಸ್ ಕೊಟ್ಟಿದ್ದರು. ನಾನು ಆಗ ಕರ್ತವ್ಯದಲ್ಲಿ ಇದ್ದು ಪೋಲಿಸರು ಬಂದು ಪಂಚರಾಗುವಂತೆ ನನ್ನನು ಕರೆದಿದ್ದರು. ನನಗೆ ರಾತ್ರಿ ಪಾಳಿ ಸಂಜೆ 04 ರಿಂದ ಬೆಳಿಗ್ಗೆ 9.00 ರವರೆಗೆ ಇರುತ್ತದೆ. ನಾನು ಸ್ಥಳಕ್ಕೆ ಹೋದಾಗ ಸುಮಾರು 06.30. ಪಂಚನಾಮಾ ಜಾಗದಲ್ಲಿ ನಾವಲ್ಲದೇ ಇನ್ನೂ 10 ರಿಂದ 20 ಜನ ಇದ್ದರು ಎಂದರೆ ಅವರೆಲ್ಲಾ ಚಿಕಿತ್ಸೆಗಾಗಿ ಬಂದ ರೋಗಿಗಳೆಂದು ಸಾಕ್ಷಿ  ಹೇಳುತ್ತಾರೆ. 06.30 ಇಂದು ಸುಮಾರು ಅರ್ಧ ಗಂಟೆ ಮಹಜರ್ ನ್ನು ಮಾಡಿರುತ್ತಾರೆ. ಮಹಜರ್ ಬರೆದಿದ್ದಾರೆ ಅಥವಾ ಟೈಪ್ ಮಾಡಿಸಿದ್ದಾರೆ ಎಂದರೆ ಗೊತ್ತಿಲ್ಲ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಹೇಳಿದಂತೆ ಪೋಲಿಸರು ಯಾವುದೇ ಮಹಜರ್ ಗೆ ಬಂದಿಲ್ಲ ಎಂದರೆ ಸರಿಯಲ್ಲ. ಪೋಟೊದ ಮೇಲೆ ಪೋಲಿಸರು ನನ್ನ ಸಹಿಯನ್ನು ಪಡೆಯಲಿಲ್ಲ. ನಾನು ಮತ್ತು ಚಾಸಾ-8 ರವರು ಮಾತ್ರ ಪಂಚರಾಗಿ ಸಹಿ ಮಾಡಿದೆವು. ನಾನು ಪೋಲಿಸರಿಗೆ ಹೇಳಿಕೆ ನೀಡಿಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆಂದರೆ  ಸರಿಯಲ್ಲ.

**<u>ಮರು ವಿಚಾರಣೆಃ ..... ಇಲ್ಲ .....</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)  ಓ.ಹೇ.ಕೇ. ಸರಿ ಇದೆ.

ಸಹಿ/-

ದಿಃ 18.07.2025
ಸ್ಥಳಃ ಚಿಂತಾಮಣಿ

**(ಕೆ.ಎಂ.ರಾಜಶೇಖರ)**
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.